

ಡಾ.ವಿನೋದ ಛೆಬ್ಬಿ

**ದಾಂಪತ್ಯ ಎಷ್ಟೊಂದು 'ವೈಯಕ್ತಿಕ' ಆಗಿರುತ್ತದೆ ಎಂದರೆ ಅದನ್ನು ಊಹಿಸಲೂ ಸಾಧ್ಯವಿಲ್ಲ!**

# 71:ಪರಸಂಬಂಧದ ಹೊಳಹುಗಳು

ಸಂಗಾತಿಯನ್ನು ಬಿಟ್ಟು ಮೂರನೆಯವರ ಜೊತೆ ನಡೆಸುವ ಪರಸಂಬಂಧದ (affair) ಬಗೆಗೆ ಮಾತಾಡುತ್ತಿದ್ದೆವು. ಅದನ್ನೀಗ ಮುಂದುವರಿಸೋಣ.

ಪರಸಂಬಂಧದ ವಿಷಯಕ್ಕೆ ಬಂದಾಗ ಕೆಲವು ಪ್ರಶ್ನೆಗಳು ಕಾಡುತ್ತವೆ: ಪರಸಂಬಂಧ ಎಂದರೇನು, ಅದರ ವ್ಯಾಖ್ಯೆ ಏನು? ಅದು ಏನೇನನ್ನು ಒಳಗೊಳ್ಳುತ್ತದೆ? ಯಾವುದು ಪರಸಂಬಂಧ ಹೌದು, ಯಾವುದು ಅಲ್ಲ?

ಇಬ್ಬರು ಸಂಗಾತಿಗಳು ಮದುವೆಯಿಂದಲೋ, ಹೆಣೆದುಕೊಂಡ ಬಾಂಧವ್ಯದಿಂದಲೋ ಪರಸ್ಪರ ಬದ್ಧರಾಗಿರುತ್ತಾರಲ್ಲವೆ? ಅಂಥವರು ಮೂರನೆಯವರ ಜತೆಗೆ ಲೈಂಗಿಕ ಸಂಪರ್ಕ ನಡೆಸಿದರೆ ಅದು ಪರಸಂಬಂಧ ಎನ್ನಿಸಿಕೊಳ್ಳುತ್ತದೆ ಎಂದು ನಾವೆಲ್ಲ ನಂಬುತ್ತೇವೆ. ಕಾನೂನಿನಲ್ಲಿ ಇದಕ್ಕೆ ವ್ಯಭಿಚಾರ ಎಂದು ಹೆಸರಿದೆ. ಆದರೆ ಇದು ವ್ಯಾವಹಾರಿಕ ದೃಷ್ಟಿಕೋನವಾಯಿತೇ ವಿನಾ ಸಾರ್ವತ್ರಿಕವಾಗಬೇಕೆಂದಿಲ್ಲ. ಉದಾಹರಣೆಗಾಗಿ, ನನಗೆ ಗೊತ್ತಿರುವ ಹಿರಿಯ ಸರಕಾರಿ ಅಧಿಕಾರಿ ಒಬ್ಬರಿದ್ದಾರೆ. ಆತ ಕೈ ಬಿಸಿಮಾಡಿಸಿಕೊಳ್ಳುವುದರಲ್ಲಿ ಎತ್ತಿದ ಕೈ. ಕೈಗೆ ಸಂಬಳಕ್ಕಿಂತ ಗಿಂಬಳ ಹೆಚ್ಚು ಬರುವುದು ಆತನ ಹೆಂಡತಿಗೆ ಅಪ್ಯಾಯಮಾನ. ಆತನ ಕೆಲಸದಲ್ಲಿ ಮಾಮೂಲು ಸಿಗುವಂತೆ ಹೆಣ್ಣುಗಳೂ ಸಿಗುವುದು ಮಾಮೂಲು ಅಂತೆ. ಹಾಗಾಗಿ ಆತ ಲೈಂಗಿಕ ಕಾಯಿಲೆಗೆ ತುತ್ತಾಗಿ ನನ್ನಲ್ಲಿ ಪತ್ನೀಸಹಿತ ಚಿಕಿತ್ಸೆ ಪಡೆದಿದ್ದೂ ಇದೆ. ಒಮ್ಮೆ ಆತನ ಹೆಂಡತಿಯನ್ನು ಕೇಳಿದೆ: 'ನಿಮ್ಮವರ ಹೆಣ್ಣಿನ ಚಟ... ನಿಮಗೇನು ಅನ್ನಿಸುತ್ತದೆ?' ಆಕೆಯ ಉತ್ತರ? 'ದೊಡ್ಡ ಅಧಿಕಾರದಲ್ಲಿ ಇರುವವರು ನಾನಾ ಪ್ರಸಂಗ ಎದುರಿಸಬೇಕಾಗುತ್ತದೆ. ಅದೆಲ್ಲ ಮನೆಯಲ್ಲಿರೋ ಹೆಂಗಸರಿಗೇನು ಗೊತ್ತಾಗುತ್ತದೆ? ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರಲ್ಲ, ಅಷ್ಟೇ ಸಾಕು!' ಇಲ್ಲಿ 'ಚೆನ್ನಾಗಿ ನೋಡಿಕೊಳ್ಳುವುದು' ಎಂದರೆ ಏನಿರಬಹುದು ಎಂದು ಆಕೆಯನ್ನು ದೃಷ್ಟಿಸಿದಾಗ ಗೊತ್ತಾಯಿತು: ಆಕೆಯ ಮೈಮೇಲೆ ಅರ್ಧ ಕಿಲೋ ಚಿನ್ನ ನೇತಾಡುತ್ತಿತ್ತು. ಪುಣ್ಯ, ಸರಕಾರದಲ್ಲಿ ನಿವೃತ್ತಿ ಅಂತ ಒಂದು ಇರುವುದರಿಂದ ಅವರೀಗ ವಿಶ್ರಾಂತರಾಗಿದ್ದಾರೆ.

ಇಲ್ಲೊಂದು ಪ್ರಶ್ನೆ: ಶಾರೀರಿಕ ಸಂಪರ್ಕ ನಡೆಯದಿದ್ದರೂ ಅದು ಪರಸಂಬಂಧ ಅನ್ನಿಸಿಕೊಳ್ಳುತ್ತದೆಯೆ? ಪರಸಂಬಂಧವು ಲೈಂಗಿಕ ಸಂಪರ್ಕದ ಹೊರತಾಗಿ ಹಲವಾರು ರೀತಿಗಳಲ್ಲಿ ವ್ಯಕ್ತಗೊಳ್ಳಬಹುದು. ಹಾಗೆ ಹೇಳಬೇಕೆಂದರೆ ಭಾವನಾತ್ಮಕ ಸಂಬಂಧವೇ ವ್ಯಾಪಕವಾಗಿ ಕಂಡುಬರುತ್ತದೆ. ಹೆಚ್ಚಿನವರಿಗೆ ಭಾವನಾತ್ಮಕವಾಗಿ ಒಳಗೊಂಡು, ಸಂಗಾತಿಯೊಡನೆ ಹಂಚಿಕೊಳ್ಳಲಾರದ ಭಾವನೆಗಳನ್ನು ಮೂರನೆಯವರೊಂದಿಗೆ ಹಂಚಿಕೊಳ್ಳುವುದು ಪುಳಕದ ಅನುಭವ ಕೊಡುತ್ತದೆ. ಎಷ್ಟೋ ಜನರು ಬದ್ಧಸಂಗಾತಿಯ ಜೊತೆಗೆ ತೋರಿಸದ ಉತ್ಕಟ ಪ್ರಣಯಭಾವವನ್ನು ಮೂರನೆಯವರೊಡನೆ ತೋರಿಸಿಕೊಳ್ಳುತ್ತಾರೆ. ಇನ್ನು ಕೆಲವರು ಪ್ರೀತಿ ಪ್ರೇಮ ಎಂಥದ್ದೂ ಇಲ್ಲದೆ ಮೂರನೆಯವರಿಗೆ 'ಸುಮ್ಮನೇ' ಹತ್ತಿರವಾಗಿದ್ದು ಹಂಚಿಕೊಂಡು ಹರಟೆ ಹೊಡೆಯುವುದನ್ನು ಇಷ್ಟಪಡುತ್ತಾರೆ. ಇಲ್ಲೊಬ್ಬಳು ತನ್ನ ಬ್ಯಾಂಕಿನಲ್ಲಿ ಗಂಡು ಸಹೋದ್ಯೋಗಿಯೊಂದಿಗೆ ಕಳೆದ ಸಮಯದ ಬಗೆಗೆ ರಸಭರಿತವಾಗಿ ವರ್ಣಿಸುವಾಗಲೆಲ್ಲ ಗಂಡನಿಗೆ ಮತ್ಸರ ಉಕ್ಕುತ್ತದೆ. ಇನ್ನೊಬ್ಬನ ಉಡುಪು ತಯಾರಿಕೆಯ ಉದ್ಯಮದಲ್ಲಿ ಇರುವವರೆಲ್ಲ ಮಹಿಳೆಯರೇ ಆಗಿದ್ದಾರೆ. ಕೆಲವು ಸಲ ಇವನು ಮಹಿಳೆಯರೊಡನೆ ನಗುತ್ತ ಮಾತಾಡುವಾಗಲೆಲ್ಲ ಅಲ್ಲಿಯೇ ಇರುವ ಹೆಂಡತಿಗೆ ಅಸಹನೆ ಉಕ್ಕುತ್ತದೆ. ಗಂಡನ ಮೇಲೆ ನಂಬಿಕೆ ಇದ್ದರೂ, 'ನಿಮಗೆ ಹುಡುಗಿಯರನ್ನು ಬಿಟ್ಟು ಯಾರೂ ಗಂಡಸರೇ ಸಿಗುವುದಿಲ್ಲವೆ?' ಎಂದು ಆಕ್ಷೇಪಣೆ ಮಾಡಿದ್ದಿದೆ. ತಡರಾತ್ರಿ ಕರೆಮಾಡುವುದು ಅಥವಾ ಮೆಸೇಜ್ ಕಳಿಸುವುದು, ತೀರಾ ವೈಯಕ್ತಿಕ ವಿಷಯಗಳನ್ನು ಹಂಚಿಕೊಳ್ಳುವುದು, ಸಂಗಾತಿಯ ಇಷ್ಟದ ವಿರುದ್ಧ ಮೂರನೆಯವರಿಗೆ ಕಾಣಿಕೆ ಖರೀದಿಸುವುದು, ಮದುವೆಯಾದ ಮೇಲೂ ಮಾಜಿ ಸಂಗಾತಿಯ ಜೊತೆಗೆ ಸಂಪರ್ಕ ಮುಂದುವರಿಸುವುದು– ಇಂಥದ್ದೆಲ್ಲ ಪರಸಂಬಂಧದ ಲೆಕ್ಕಕ್ಕೇ ಬರುತ್ತದೆ. ಇದು ಬರೀ ಸ್ನೇಹವಾಗಲಾರದೆ ಎನ್ನುವವರಿಗೆ ಈ ಸ್ಪಷ್ಟೀಕರಣ: ಈ ರೀತಿಯ ನಡವಳಿಕೆ ಸಂಗಾತಿಯನ್ನು 'ನೀನಿದಕ್ಕೆ ಅರ್ಹನ/ಳಲ್ಲ' ಎಂದು ತೋರಿಸುವಂತಿದೆ. ಉದಾಹರಣೆಗಾಗಿ, ಒಬ್ಬ ತನ್ನ ಗೆಳತಿಯೊಡನೆ ಇಂಗ್ಲಿಷ್ ಸಾಹಿತ್ಯದ ಬಗೆಗೆ ಗಂಟೆಗಟ್ಟಲೆ ಮಾತಾಡುವಾಗ ಇಂಗ್ಲಿಷ್ ಹೆಚ್ಚೇನೂ ಅರಿಯದ ಆತನ ಹೆಂಡತಿ ಕೆರಳುತ್ತಾಳೆ. ಆಗ ಗಂಡ, 'ನಿನಗೇ ಇಂಗ್ಲಿಷ್ ಬರುತ್ತಿಲ್ಲವಲ್ಲ, ಹಾಗಾಗಿ ಇನ್ನೊಬ್ಬರ ಜೊತೆಗೆ ಮಾತಾಡುತ್ತೇನೆ.' ಎಂದು ಹೇಳುತ್ತಾನೆ. ಮೇಲುನೋಟಕ್ಕೆ ಇದು ಸಮರ್ಥನೀಯ ಎಂದು ಕಂಡುಬಂದರೂ ಅವನ ಮನಸ್ಸಿನಾಳಕ್ಕೆ ಇಣುಕಿದರೆ ಅರಿವಾಗುವುದೇ ಬೇರೆ: ಹೆಂಡತಿಗೆ ಇಂಗ್ಲಿಷ್ ಬರುವುದಿಲ್ಲ ಎನ್ನುವ ಕಾರಣದಿಂದ ಆಕೆಯನ್ನು ಪರೋಕ್ಷವಾಗಿ ಚುಚ್ಚುತ್ತಿದ್ದಾನೆ– ಇಲ್ಲಿ ಸಂಗಾತಿ ಭಾವನಾತ್ಮಕ ಹಿಂಸೆಗೆ (intimate partner violence) . ಒಳಗಾಗುತ್ತಿದ್ದಾಳೆ.

ಹಾಗೆ ಹೇಳಬೇಕೆಂದರೆ ಶಾರೀರಿಕ ಸಂಬಂಧಕ್ಕಿಂತ ಭಾವನಾತ್ಮಕ ಸಂಬಂಧವು ಸಂಗಾತಿಗೆ ಹೆಚ್ಚು ನೋವು ಉಂಟುಮಾಡುತ್ತದೆ ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. ಉದಾಹರಣೆಗಾಗಿ, ಈ ಮಹಿಳೆಯ ಗಂಡನಿಗೆ ತಿಂಗಳಲ್ಲಿ ಇಪ್ಪತ್ತೈದು ದಿನ ಊರೂರು ಅಲೆಯುವುದೇ ಕೆಲಸ. ಒಂದುಸಲ ಈಕೆ ಅವನ ಪ್ರವಾಸದ ಸೂಟ್ ಕೇಸ್ ಖಾಲಿಮಾಡುವಾಗ ಕಾಂಡೋಮ್ ಪ್ಯಾಕೆಟ್ ಸಿಕ್ಕು ಅದನ್ನು ಅವನ ಕಣ್ಣಮುಂದೆ ಹಿಡಿದಳು. ಅವನು ಬೆಬೆಬೆ ಎನ್ನುತ್ತ ತನ್ನ ಸಹೋದ್ಯೋಗಿಯ ಮೇಲೆ ತಪ್ಪು ಹೊರಿಸಿದ. ಈಕೆ ನಂಬಲಿಲ್ಲ– ನಂಬಿದಳೆಂದು ಅವನಿಗೂ ಅನ್ನಿಸಲಿಲ್ಲ. ಮುಂದೆ ಅವನು ಅದನ್ನು ನಿಲ್ಲಿಸಿದನೋ ಅಥವಾ ಕಾಂಡೋಮ್ ಸಿಗದಂತೆ ಎಚ್ಚರ ವಹಿಸಿದನೋ ಗೊತ್ತಿಲ್ಲ, ಅಂತೂ ಬದುಕು ಮುಂದುವರಿಯಿತು. ಎರಡು ವರ್ಷದ ನಂತರ ಗಂಡನ ಕಂಪ್ಯೂಟರಿನ ಅಂಚೆಪೆಟ್ಟಿಗೆ ತೆರೆದಿಟ್ಟಿದ್ದು ಅವಳ ಕಣ್ಣಿಗೆ ಬಿತ್ತು. ಅದರಲ್ಲಿ ಒಂದು ಒಕ್ಕಣಿಕೆ ಇವಳ ಗಮನ ಸೆಳೆಯಿತು. ತೆರೆದು ನೋಡಿದಾಗ ಕಂಡಿದ್ದು ಸಹೋದ್ಯೋಗಿಯೊಡನೆ ಗಂಡನ ಪ್ರಣಯ ಪ್ರಕರಣ. ಇತ್ತೀಚೆಗೆ ಆ ಹೆಣ್ಣು ಬರೆದುಕೊಂಡಿದ್ದಳು: ಒಂದು ಸಲವಾದರೂ ನಿನ್ನ ಜೊತೆಗೆ ಮಲಗಬೇಕು. ಅದಕ್ಕವನು ನೋಡೋಣ ಎಂದು ಉತ್ತರಿಸಿದ್ದ. ಆಕೆ ಕಣ್ಣೀರಿಡುತ್ತ ಹೇಳಿದಳು: 'ಮುಂಚೆ ಅವನು ಹೊರಗೆ ಅಕಸ್ಮಾತ್ತಾಗಿ ಶಾರೀರಿಕ ಸಂಪರ್ಕ ನಡೆಸಿದ್ದಾಗ ಅವನಿಗೆ ಹೆಣ್ಣಿನ ದೌರ್ಬಲ್ಯ ಇದೆಯೆನ್ನಿಸಿ ಸಿಟ್ಟಾಗಿದ್ದೆ.. ಈಗ ಇನ್ನೊಬ್ಬಳು ಹೆಣ್ಣು ಅವನನ್ನು ಪ್ರೀತಿಸುತ್ತಿರುವಾಗ ನನ್ನಲ್ಲೇ ದೋಷವಿದೆ ಎಂದು ನನಗೆ ಅನ್ನಿಸುತ್ತಿದೆ.'

ಸಂಗಾತಿ ಎನ್ನುವಾಗ ಸಲಿಂಗಕಾಮಿ ಜೋಡಿಗಳು ನೆನಪಾಗುತ್ತಾರೆ. ಇಬ್ಬರು ಸಲಿಂಗಕಾಮಿಗಳು ಸಂಬಂಧ ಇಟ್ಟುಕೊಳ್ಳುವಾಗ ಅವರಿಗೂ ಹೃದಯಕ್ಕೆ ಸಮೀಪದ ವ್ಯಕ್ತಿಯ ಜೊತೆ ಅಪ್ಯಾಯಮಾನವಾಗುತ್ತದೆ– ಯಾಕೆಂದರೆ ಅವರೂ ನಮ್ಮನಿಮ್ಮಂತೆ ಮನುಷ್ಯರು ತಾನೆ? ಒಬ್ಬ ಗಂಡು ಸಲಿಂಗಕಾಮಿ ನನ್ನಲ್ಲಿ ಹೇಳಿಕೊಂಡ: 'ನೀವು ಮದುವೆಯಾಗಿದ್ದೀರಲ್ಲ, ಹಾಗೆಯೇ ನನಗೆಂತಲೇ ಮೀಸಲಾಗಿರುವ ಸಂಗಾತಿ ಬೇಕು, ಅವನನ್ನು ಮದುವೆಯಾಗಿ, ಮನೆ ಮಾಡಿಕೊಂಡು ಸುಖದಾಂಪತ್ಯ ನಡೆಸಬೇಕು ಅಂತ ಬಲವಾಗಿ ಅನ್ನಿಸುತ್ತದೆ. ಆದರೆ ಸಮಾಜ, ಕಾನೂನು ನಮ್ಮನ್ನು ಮನುಷ್ಯರು ಅಂತಲೇ ಲೆಕ್ಕ ಮಾಡುವುದಿಲ್ಲ. ಹಾಗಾಗಿ ನಾನು ಮೆಚ್ಚಿ ಸುಖಿಸಿದ ಸಂಗಾತಿ ಇನ್ನೊಬ್ಬನೊಡನೆ ಮಲಗುತ್ತಾನೆ ಎನ್ನುವಾಗ ನನಗೆ ಸಂಕಟ ಆಗುತ್ತದೆ. ಸುಪ್ರೀಮ್ ಕೋರ್ಟ್ ನಮ್ಮ ಮೊರೆಯನ್ನು ಯಾವಾಗ ಮನ್ನಿಸುತ್ತದೆಯೋ ಗೊತ್ತಿಲ್ಲ.' ಇನ್ನೊಂದು ಸಲಿಂಗಕಾಮಿ ಜೋಡಿಯಲ್ಲಿ ಒಬ್ಬ ಉಭಯಲಿಂಗಿ– ಅಂದರೆ ಹೆಣ್ಣು ಹಾಗೂ ಗಂಡು ಇಬ್ಬರೊಡನೆಯೂ ಸುಖಿಸಬಲ್ಲ. ಅವನೊಂದು ಹುಡುಗಿಯನ್ನು ಮದುವೆಯಾಗಬೇಕೆಂದು ಇಷ್ಟಪಟ್ಟಾಗ ಅವನ ಸಲಿಂಗಿ ಸಂಗಾತಿಯಯು ಆಕೆಯನ್ನು ಕೊಲೆಮಾಡಲು ಹೋಗಿದ್ದೂ ಇದೆ.

ಒಟ್ಟಿನಲ್ಲಿ, ಪರಸಂಬಂಧವನ್ನು ಎಲ್ಲರಿಗೂ ಅನ್ವಯವಾಗುವಂಥ ಒಂದು ವ್ಯಾಖ್ಯೆಯೊಳಗೆ ಹಿಡಿದಿಡುವುದು ಸುಲಭವಲ್ಲ. ಒಂದು ಹೊರಸಂಬಂಧ ಸಂಗಾತಿಗಳಿಬ್ಬರಿಗೂ ಸುರಕ್ಷಿತ ಎನ್ನಿಸಬೇಕು. ಒಬ್ಬರ ಸುಭದ್ರತೆಗೆ ಧಕ್ಕೆ ಬರುತ್ತಿದೆ ಎನ್ನಿಸತೊಡಗಿದರೆ ಅದಕ್ಕೆ ಪರಸಂಬಂಧ ಎನ್ನಬಹುದು. ಏನು ಮಾಡಿದರೆ ಹೌದು/ ಅಲ್ಲ ಎನ್ನುವುದು ಆಯಾ ದಂಪತಿಗಳ ಮೇಲೆ ಅವಲಂಬಿಸುತ್ತದೆ. ಯಾಕೆಂದರೆ ಪ್ರತಿ ಸಂಬಂಧಕ್ಕೂ ಅದರದೇ ಆದ 'ವೈಯಕ್ತಿಕತೆ' ಇದೆ!

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 2ರಿಂದ 4ರ ತನಕ);
ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)
ಲೇಖಕರ ವಿಳಾಸ: www.medisex.org